ಓ.ಎಸ್. – 221/2013

ಡಿ.ಡಬ್ಲೂ – 2

**ಸಾಕ್ಷಿಯನ್ನು ದಿಃ 21.03.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಟಿ.ಆರ್. ವಕೀಲರಿಂದ**

1. ನಾನು ಸಿಡೇಬೈಲು, ನಾಡ ವಡ್ಡಳ್ಳಿ ಗ್ರಾಮದ ನಿವಾಸಿ ಎಂದರೆ ಸರಿ. ಈ ದಾವೆಯ ವಾದಿಯರು ಚಿಕ್ಕಮತ್ತೂರು ಗ್ರಾಮದ ವಾಸಿಗಳು ಎಂದರೆ ಸರಿ. ನಮ್ಮ ಊರಿನಿಂದ ವಾದಿಯರ ಊರಿಗೆ 1 1/2 ಕಿ ಮೀ ಅಂತರವಿರುತ್ತದೆ. ನಾನು ಚಿಕ್ಕಮತ್ತೂರು ಗ್ರಾಮದ ಸರ್ವೇ ಸಂಖ್ಯೆ67 ರಲ್ಲಿ 1 ಎಕರೆ ಸ್ವತ್ತನ್ನು ಖರೀದಿಸಿರುತ್ತೇನೆ. ನನಗೆ ಮೊದಲಿನಿಂದಲೂ ವಾದಿಯರ ಕುಟುಂಬದ ಪರಿಚಯವಿತ್ತು. ಗೀತಾರವರ ಪತಿ ಯೋಗರಾಜ್ ರವರ ಪರಿಚಯ ನನಗೆ ಇತ್ತು. ಯೋಗರಾಜ್ ರವರ ತಂದೆ ಮಂಜಯ್ಯ ಮತ್ತು 1ನೇ ಪ್ರತಿವಾದಿಯ ಪರಿಚಯ ನನಗೆ ಇರುತ್ತದೆ.

2. ಮಂಜಯ್ಯರವರು ಜೀವಿತವಿರುವಾಗ ಅವರನ್ನು ಮತ್ತು ಕುಟುಂಬವನ್ನು ಯೋಗರಾಜ್ ರವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ತಿಳಿಸಿದರು, ಆಗ ನಾನು ಸ್ವತ್ತನ್ನು ನೋಡಿಯೇ ಖರೀದಿಸಿರುತ್ತೇನೆ. ದಾವಾ ಜಮೀನಿಗೆ ಸಂಬಂಧಿಸಿದ ದಾಖಲಾತಿಗಳನ್ನು 1ನೇ ಪ್ರತಿವಾದಿಯ ಬಳಿಯೇ ಕೇಳಿರುತ್ತೇನೆ. 1ನೇ ಪ್ರತಿವಾದಿಗೆ ಆಸ್ತಿ ಹೇಗೆ ಬಂತು ಎಂದು ನಾನು ವಿಚಾರಿಸಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು 1ನೇ ಪ್ರತಿವಾದಿ ತೋರಿಸಿದ ನಂತರವೇ ಕ್ರಯಕ್ಕೆ ಪಡೆಯುವ ಒಪ್ಪಂದ ಆಗಿರುತ್ತದೆ. ಕ್ರಯ ಪತ್ರ ಆದ ದಿನವೇ 1 ನೇ ಪ್ರತಿವಾದಿ ದಾವಾ ಆಸ್ತಿಗೆ ಸಂಬಂಧಿಸಿದ ಎಲ್ಲಾ ಅಸಲು ದಾಖಲೆಗಳನ್ನು ನನಗೆ ನೀಡಿರುತ್ತಾರೆ.

3. ಕ್ರಯ ಪತ್ರದಲ್ಲಿ ಬರೆದಿರುವಂತೆ ದಿಃ23.07.1994 ರ ವಿಭಾಗ ಪತ್ರವನ್ನು 1ನೇ ಪ್ರತಿವಾದಿ ನನಗೆ ನೀಡಿರುತ್ತಾರೆ. ಹಿಸ್ಸೆ ಪತ್ರದ ಆಧಾರದ ಮೇಲೆ ಆದ ಮ್ಯುಟೇಶನ್ ದಾಖಲೆಯನ್ನು ಸಹ 1ನೇ ಪ್ರತಿವಾದಿ ನನಗೆ ನೀಡಿರುತ್ತಾರೆ. 1ನೇ ಪ್ರತಿವಾದಿ ನನಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ನೀಡಿರುವ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ಸಾಕ್ಷಿಗೆ ವಿಭಾಗ ಪತ್ರವನ್ನು ಗುರುತಿಸಿ ತೋರಿಸಿ ಎಂದು ಅವರು ಹಾಜರುಪಡಿಸಿದ ದಾಖಲೆಗಳನ್ನು ಅವರಿಗೆ ನೀಡಿದಾಗ ನಾನು ಓದಿರುವುದಿಲ್ಲ ನನಗೆ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ.

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ